# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:DDP:ಆಂಮ:ವಿವ :2007-08 ದಿನಾಂಕ: 18-01-2008

## ಆದೇಶ.

**ವಿಷಯ** : 2006-07 ನೇ ಸಾಲಿನ DDP ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ**: ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08/ ದಿನಾಂಕ:4-1-2008.

ಉಲ್ಲೇಖಿತ ಪತ್ರದ ಮೂಲಕ ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು 2006-07 ನೇ ಸಾಲಿನ DDP ಕ್ರಿಯಾ ಯೋಜನೆಯಲ್ಲಿ ಮಂಜೂರಾಗಿರುವ ಕೆಳಕಾಣಿಸಿದ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಸಲ್ಲಿಸಿ ಆಡಳಿತಾತ್ಮಕ ಮಂಜೂರಾತಿ ಕೋರಿದ್ದು, ಅಂದಾಜು ಪತ್ರಿಕೆಗಳನ್ನು ಪರಿಶೀಲಿಸಲಾಗಿ ಸದ್ರಿ ಕಾಮಗಾರಿಗಳು 2006-07 ನೇ ಸಾಲಿನ DDP ಕ್ರಿಯಾ ಯೋಜನೆಯಲ್ಲಿ ಸೇರಿ ಅನುಮೋದನೆಯಾಗಿ ರುತ್ತವೆ.

ಈ ಕೆಳಕಂಡ ಕಾಮಗಾರಿಗಳು 2007-08 ನೇ ಸಾಲಿನ DDP ಕ್ರಿಯಾ ಯೋಜನೆಯಲ್ಲಿ ಸೇರಿ ಅನುಮೋದನೆಗೊಂಡಿದ್ದು ಕಾರ್ಯಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸದರಿ ಕಾಮಗಾರಿಗಳನ್ನು ಇದುವರೆಗೆ ಪ್ರಾರಂಭಿಸಿಲ್ಲ ಎಂದು ದೃಢೀಕರಿಸಿರುವುದರಿಂದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| **ತಾಲೂಕ :ದೇವದುರ್ಗ** DDP (ರೂ.ಲಕ್ಷದಲ್ಲಿ) | | | | | |
|---|---|---|---|---|---|
| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ | ಕ್ರಿ.ಯೋ. ಯಲ್ಲಿನ ಪುಟ ಸಂ. ಹಾಗೂ ಕ್ರ.ಸಂ. 06-07 ನೇ ಸಾಲು | 07-08 ನೇ ಸಾಲು | ಷರಾ |
| 1 | ಮದರಕಲ್ ಗ್ರಾಮದಲ್ಲಿ ಕೀ.ನೀ.ಯೋಜನೆ. ( ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ 4-ಸಿಸ್ಟರ್ನ್ ಒದಗಿಸುವುದು) | 5.00 | 5/1 | 16/12 | ಮದರಕಲ್ ಮತ್ತು ಪಲಕನಮರಡಿ ಗ್ರಾಮಗಳ ತಲಾ 10 ಲಕ್ಷದ ಕಾಮಗರಿಗಳ ಬದಲಾಗಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. |
| 2 | ಜಾನಮರಡಿ ಗ್ರಾಮದಲ್ಲಿ ಕೀ.ನೀ.ಯೋಜನೆ. ( ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ 2-ಸಿಸ್ಟರ್ನ್ ಒದಗಿಸುವುದು) | 5.00 | 5/1 | 16/12 | |
| 3 | ಪಲಕನಮರಡಿ ಗ್ರಾಮದಲ್ಲಿ ಕೀ.ನೀ.ಯೋಜನೆ. ( ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ 5-ಸಿಸ್ಟರ್ನ್ ಒದಗಿಸುವುದು) | 5.00 | 5/2 | 16/13 | |
| 4 | ಮೂಡಲಗುಂಡ ಗ್ರಾಮದಲ್ಲಿ ಕೀ.ನೀ.ಯೋಜನೆ. ( ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ 3-ಸಿಸ್ಟರ್ನ್ ಒದಗಿಸುವುದು) | 5.00 | 5/2 | 16/13 | |
| 5 | ಕ್ಯಾದಿಗೇರಾ ಗ್ರಾಮದಲ್ಲಿ ಕೋ.ನೀ.ಸ.ಯೋಜನೆಅಭಿವೃದ್ಧಿ ( ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ 4-ಸಿಸ್ಟರ್ನ್ ಒದಗಿಸುವುದು) | 7.00 | 5/4 | 16/17 | |
| 6 | ಹೇರುಂಡಿ ಗ್ರಾಮದಲ್ಲಿ ಕೋ.ನೀ.ಸ.ಯೋಜನೆ. ( 50000 ಲೀ OHT, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ ಹಾಗೂ KEB ಠೇವಣಿ ಒದಗಿಸುವುದು | 10.00 | 5/3 | 16/14 | |
| **ತಾಲೂಕ :ರಾಯಚೂರು. DDP** | | | | | |
| 7 | ಮಂಡಲಗೇರಾ ಗ್ರಾಮದಲ್ಲಿ ಕೋ.ನೀ.ಸ.ಯೋಜನೆ. ( 50000 ಲೀ OHT, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ 6- ಸ್ಟಾಂಡ ಪೋಸ್ಟ ಹಾಗೂ KEB ಠೇವಣಿ ಒದಗಿ ಸುವುದು | 13.00 | 2/1 | 15/7 | ಕ್ರಿ.ಯೋ. ಅಂದಾಜು ರೂ.12.00 |

| | | | | | |
|---|---|---|---|---|---|
| 8 | ಗೋನ್ವಾರ ಗ್ರಾಮದಲ್ಲಿ ಕೋ.ನೀ.ಸ.ಯೋಜನೆ. ( 50000 ಲೀ OHT, ಪೈ.ಲೈನ, ಪಂ.ಹೌಸ, ಪಂಪಿಂಗ ಮಷಿನರಿ 6- ಸ್ಟಾಂಡ ಪೊಸ್ಟ ಹಾಗೂ KEB ಠೇವಣಿ ಒದಗಿ ಸುವುದು | 12.00 | 3/1 | 15/26 | ಕ್ರಿ.ಯೋ. ಅಂದಾಜು ರೂ.7.00 |

**ಷರತ್ತುಗಳು:**

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಎಲ್ಲಾ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.
4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿಗೆ ಒದಗಿಸುವುದು.
5. ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅದ್ಯಕ್ಷರು/ಉಪಾದ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯತ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಜಿಲ್ಲಾ ಪಂಚಾಯತ ಇಂಜಿನೀಯರಿಂಗ ಉಪವಿಭಾಗ ಸಿಂಧನೂರು
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ ಸಿಂಧನೂರು.
6. ಅದ್ಯಕ್ಷರು / ಕಾರ್ಯದರ್ಶಿಗಳು ________________ಗ್ರಾಮ ಪಂಚಾಯತ, ________ ತಾಲ್ಲೂಕು ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಢೀಕರಿಸುವುದು.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.